ಇಮೋಜಿ ಭಾಷೆ

**ಕರ್ಕಿ ಕೃಷ್ಣಮೂರ್ತಿ**



# ಯಾವುದು ‘ಮೌಲ್ಯ’? ನಿರ್ಣಯಿಸುವುದು ಹೇಗೆ?

ಅಂಗಡಿಯಲ್ಲಿ ಸಾಮಾನುಗಳನ್ನು ಕೊಂಡು ತಂದು ಮನೆಯಲ್ಲಿ ಅಡುಗೆ ಮಾಡಿ ಉಣ್ಣುವುದಕ್ಕಿಂತ, ಬಹುರಾಷ್ಟ್ರೀಯ ಮಳಿಗೆಯಲ್ಲಿ ತಿನ್ನುವುದೇ ಸೋವಿ ಆಗಬಹುದಾದ ಲೆಕ್ಕಾಚಾರ ಬಹುಶಃ ಆಡಮ್ ಸ್ಮಿತ್‌ನಿಗೆ ಹೊಳೆದಿರಲಿಕ್ಕಿಲ್ಲ.

ಮನೆಗೊಂದಿಷ್ಟು ಆಲಂಕಾರಿಕ ಗಿಡಗಳನ್ನು ಕೊಳ್ಳಲು ನರ್ಸರಿಯೊಂದಕ್ಕೆ ಹೋಗಿದ್ದೆ. ನಾನಾರಿಸಿದ ಎರಡು ಸಸಿಗಳಲ್ಲಿ ಒಂದಕ್ಕೆ ನೂರೈವತ್ತು, ಇನ್ನೊಂದಕ್ಕೆ ಆರುನೂರು ರೂಪಾಯಿ. ಎಲೆಯ ಆಕಾರದಲ್ಲಿ ತುಸು ಬದಲಾವಣೆ ಹೊರತುಪಡಿಸಿ ಎರಡೂ ಸಸಿಗಳು ಸಮಾನ ಎತ್ತರದವೇ ಆಗಿದ್ದವು.

‘ಇನ್ನೊಂದ್ಯಾಕೆ ಇಷ್ಟು ತುಟ್ಟಿ, ಇದೇನು ಹೊರ ದೇಶದ್ದಾ?’ ಎಂಬುದಾಗಿ ವಿಚಾರಿಸಿದೆ ನಾನು.

‘ಇಲ್ಲ, ಇಲ್ಲಿಯದೇ’ ಎಂದ ನರ್ಸರಿಯ ಮಾಲೀಕ.

‘ಇದು ವಿರಳ ತಳಿಯಾ? ಅಥವಾ ಸಸಿ ಮಾಡುವುದು ಕಷ್ಟವಾ?’ ಎಂಬ ನನ್ನ ಮುಂದಿನ ಪ್ರಶ್ನೆಗೆ, ‘ಹಾಗೇನೂ ಇಲ್ಲ’ ಎನ್ನುವ ಉತ್ತರ ಬಂತು.

‘ಹಾಗಾದರೆ, ನಾಲ್ಕು ಪಟ್ಟು ಹೆಚ್ಚು ಬೆಲೆಯಿರಲು ಏನಾದರೂ ಕಾರಣ ಇರಬೇಕಲ್ಲ? ಅದೇ ನೀರು, ಗೊಬ್ಬರದ ಕಚ್ಚಾ ವಸ್ತು ತಾನೆ?’ – ನಾನೂ ಪಟ್ಟು ಬಿಡಲಿಲ್ಲ.

‘ಈ ಗಿಡಕ್ಕೆ ಸಕ್ಕತ್ ಡಿಮಾಂಡು ಸರ್’ ಎನ್ನುತ್ತ, ‘ಇದು ಬೇಕಾದ್ರೆ ನೋಡಿ ನೂರು ರೂಪಾಯಿ’ ಎಂದು ಇನ್ನೊಂದು ಸಸಿ ತೋರಿಸಿದ. ನಾನು ಬೆಲೆಯ ಬಗ್ಗೆ ಮತ್ತಷ್ಟು ಪ್ರಶ್ನಿಸತೊಡಗಿದಂತೆ, ಬೇರೆ ಗಿರಾಕಿಯನ್ನು ವಿಚಾರಿಸುವ ನೆವದಲ್ಲಿ ದೂರ ಸರಿದ.

ಜೊತೆಯಲ್ಲಿದ್ದ ಹೈಸ್ಕೂಲ್ ಓದುತ್ತಿರುವ ನನ್ನ ಮಗಳಿಗೆ ಇದ್ಯಾಕೋ ವಿಚಿತ್ರವೆನಿಸಿರಬೇಕು. ನರ್ಸರಿಯಿಂದ ವಾಪಸ್ ಬರುವಾಗ, ‘ಅದ್ಯಾಕೆ ಒಂದೊಂದು ಗಿಡಕ್ಕೆ ಒಂದೊಂದು ರೇಟ್ ಹೇಳಿದ ಆತ?’ ಎನ್ನುವ ಪ್ರಶ್ನೆಯೆಸೆದಳು. ವಸ್ತುವೊಂದರ ಮೌಲ್ಯವನ್ನು ಹೇಗೆ ನಿರ್ಧರಿಸಲಾಗುತ್ತದೆ ಹಾಗೂ ಅದರ ಹಿಂದಿರುವ ಎಕನಾಮಿಕ್ಸ್ ಸೂತ್ರಗಳನ್ನೆಲ್ಲಾ ಆಕೆಗೆ ಹೇಗೆ ವಿವರಿಸಿ ಹೇಳುವುದು? ಹಾಗಂತ ಇವೆಲ್ಲ ಅರ್ಥವಾಗದ ವಯಸ್ಸೇನೂ ಅಲ್ಲ ಅವಳದು. ನಾನು ಎಂದೋ ಓದಿದ ‘ಚಂದಮಾಮ’ದ ಕತೆಯೊಂದು ನೆನಪಾಯಿತು ನನಗೆ. ಅರ್ಥಶಾಸ್ತ್ರದ ಹಲವು ನಿಯಮಗಳನ್ನು ಹಿಡಿದು ಕೊಟ್ಟಿರುವ ಅತೀ ಸರಳ ಕಥೆಯದು.

ಒಬ್ಬ ಚರ್ಮದ ಹಾಗೂ ಇನ್ನೊಬ್ಬ ಕಬ್ಬಿಣದ ವರ್ತಕ ದೂರದ ಊರೊಂದಕ್ಕೆ ಪ್ರಯಾಣ ಬೆಳೆಸಿರುತ್ತಾರೆ. ಆ ಊರಿನಿಂದ ಚರ್ಮ ಹಾಗೂ ಕಬ್ಬಿಣ ಖರೀದಿಸಿ